ಓ.ಎಸ್ಃ 46/2011

ಡಿ.ಡಬ್ಲ್ಯೂಃ 01

**ದಿನಾಂಕಃ 08-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು**

**ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ ಎನ್.ಬಿ.ಕೆ. ವಕೀಲರಿಂದಃ**

1. 1980 ನೇ ಸಾಲಿನಲ್ಲಿ ಸರ್ವೆ ನಂ.225 ರ ಆಸ್ತಿಯಲ್ಲಿ ವಿಭಾಗವಾಗಿ ಊರು ಹಿರಿಯರು ಸರ್ವೆ ನಂ.225 ರ ಆಸ್ತಿಯನ್ನು ದಸ್ತ ಪಾಲು ಅಂತಾ ನನ್ನ ತಂದೆಯಾದ ಬಸವಂತರಾಯವರಿಗೆ ಬಿಟ್ಟಿರುತ್ತಾರೆ ಎಂದರೆ ಸಾಕ್ಷಿಯು ದಿ:25.07.1969 ರಲ್ಲಿ ನನ್ನ ತಂದೆಯು ಸರ್ವೆ ನಂ.225 ರ ಆಸ್ತಿಯನ್ನು ನೊಂದಾಯಿತ ಕ್ರಯ ಪತ್ರದ ಮುಖಾಂತರ ಖರೀದಿಸಿರುತ್ತಾರೆ ಎಂದು ಹೇಳುತ್ತಾರೆ. 1980 ರಲ್ಲಿ ವಿಭಾಗವಾಗುವ ಸಮಯದಲ್ಲಿ ಸರ್ವೆ ನಂ.225 ರ ಆಸ್ತಿಯಲ್ಲಿ ನಮಗೂ ಕೂಡಾ ಬಾಗ ಕೊಡಬೇಕೆಂದು ವಾದಿ ಕೇಳಿರುತ್ತಾರೆ ಎಂದರೆ ಸರಿಯಲ್ಲ. 1969 ರಲ್ಲಿ ಜಮೀನ ಸರ್ವೆ ನಂ.225 ರ ಆಸ್ತಿಯು ಏಕತ್ರ ಕುಟುಂಬದಲ್ಲಿ ಇತ್ತು ಎಂದರೆ ಸರಿಯಲ್ಲ. 1969 ರಲ್ಲಿ ಜಮೀನ ಸರ್ವೆ ನಂ.225 ರ ಆಸ್ತಿಯು ಏಕತ್ರ ಕುಟುಂಬದಲ್ಲಿ ಇದ್ದರು ಕೂಡಾ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನ ಸರ್ವೆ ನಂ.225 ರಲ್ಲಿ ವಾದಿ ಮತ್ತು ನಾವುಗಳು ಜಂಟಿ ಸ್ವಾಧೀನಾನುಬವದಲ್ಲಿ ಇದ್ದೇವು ಎಂದರೆ ಸರಿಯಲ್ಲ. ಸರ್ವೆ ನಂ.225 ರ ಆಸ್ತಿಯಲ್ಲಿ ವಾದಿಯು ಕೂಡಾ 1/3 ಹಿಸ್ಸೆಗೆ ಹಕ್ಕುದಾರನಾಗಿರುತ್ತಾನೆ ಎಂದರೆ ಸರಿಯಲ್ಲ.

2. ಜಮೀನ ಸರ್ವೆ ನಂ.4 ರ ಆಸ್ತಿಯ ಕುರಿತು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲೆ ಪ್ರಕರಣ ಚಾಲ್ತಿಯಲ್ಲಿ ಇತ್ತು ಎಂದರೆ ಸರಿ. ಸದರಿ ಸರ್ವೆ ನಂ.4 ರ ಆಸ್ತಿಯ ಕುರಿತು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಚಾಲ್ತಿಯಲ್ಲಿರುವುದರಿಂದ ಸದರಿ ಆಸ್ತಿಯಲ್ಲಿ ವಾದಿಗೆ ಹಿಸ್ಸೆಯನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿಯು ಸದರಿ ಆಸ್ತಿಯು ನನ್ನ ತಂದೆಯು ಖರೀದಿಸಿರುತ್ತಾರೆ ಎಂದು ಹೇಳುತ್ತಾರೆ. ನಾನು ನನ್ನ ತಂದೆಯು ಖರೀದಿಸಿರುವ ಆಸ್ತಿಗಳ ಕ್ರಯ ಪತ್ರಗಳನ್ನು ಹಾಜರುಪಡಿಸಿರುತ್ತೇನೆ. ಸರ್ವೆ ನಂ.4 ರ ಆಸ್ತಿಯನ್ನು ಕೂಡಾ ಒಟ್ಟು ಕುಟುಂಬದ ಆಧಾಯದಿಂದ ಖರೀಸಲಾಗಿರುತ್ತದೆ ಎಂದರೆ ಸರಿಯಲ್ಲ..

3. ಮುಮಾ-1 ರಿಂದ 16 ಇವುಗಳನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆಯು ಒಟ್ಟು ಕುಟುಂಬದ ಪರವಾಗಿ ಕೀರಾಣಿ ಮತ್ತು ಹಿಟ್ಟಿನ ಗಿರನಿಯ ವ್ಯಾಪರವನ್ನು ಮಾಡುತ್ತಿದ್ದರು ಎಂದರೆ ಸರಿಯಲ್ಲ. ಮುಮಾ-1 ರಿಂದ 16 ರನ್ನು ಎಲ್ಲರ ಹೆಸರಿಗೆ ಖರೀದಿಸಲು ಆಗದೇ ಇರುವ ಕಾರಣ ನನ್ನ

ತಂದೆಯ ಹೆಸರಿನಲ್ಲಿ ಮುಮಾ-1 ರಿಂದ 16 ರನ್ನು ಖರೀದಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ಮತ್ತು ಇನ್ನೊಬ್ಬರಾದ ಶಿವಶಂಕರ ತಂ ದೊಡ್ಡಪ್ಪ ತಬ್ಬಣ್ಣವರವರು ಇಬ್ಬೂರು ಸೇರಿ ಪಾಲುದಾರರಾಗಿ ಕಿರಾಣಿ ಮತ್ತು ಹಿಟ್ಟಿನ ಗಿರನಿಯ ವ್ಯಾಪಾರವನ್ನು ಮಾಡುತ್ತಿದ್ದರು. ಮುಮಾ-1 ರಿಂದ 16 ರ ಮೇಲೆ ಶಿವಶಂಕರವರ ಹೆಸರು ಇರುವುದಿಲ್ಲ. ಸಾಕ್ಷಿಯು ಮುಂದುವರೆದು ಸೊಲಿಗೆಯ ಮೇಲೆ ಶಿವಶಂಕರವರ ಹೆಸರು ಇರುತ್ತದೆ ಎಂದು ನುಡಿಯುತ್ತಾರೆ. ನಮ್ಮ ಒಟ್ಟು ಕುಟುಂಬದ ಸದಸ್ಯರುಗಳ ಪರವಾಗಿ ನನ್ನ ತಂದೆ ಮತ್ತು ಶಿವಶಂಕರವರು ಇಬ್ಬರೂ ಸೇರಿ ವ್ಯಾಪಾರ ಮಾಡುತ್ತಿದ್ದರು ಎಂದರೆ ಸರಿಯಲ್ಲ.

4. ವಾದಿಯು ಈ ದಾವೆಯನ್ನು ಸಲ್ಲಿಸುವರೆಗೂ ವಾದಿಯು ದಾವಾ ಆಸ್ತಿಯಲ್ಲಿ ಪಾಲು ಕೊಡಿ ಎಂದು ನಮ್ಮನ್ನು ಕೇಳುತ್ತಾ ಬಂದಿರುತ್ತಾನೆ ಎಂದರೆ ಸರಿಯಲ್ಲ. ವಾದಿಯು ಸಲ್ಲಿಸಿರುವ ದಾವೆಗೆ ಸುಳ್ಳು ಪ್ರತಿವಾದ ಪತ್ರವನ್ನು ನಾನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಮನ್ಯವಾಗಿ ಯಾವುದೇ ಒಬ್ಬ ವ್ಯಕ್ತಿಯು ಒಟ್ಟು ಕುಟುಂಬದ ಪರವಾಗಿ ವ್ಯಾಪಾರ ಮಾಡುತ್ತಿದ್ದರೇ ಒಬ್ಬರ ಹೆಸರಿನಲ್ಲಿ ಮಾತ್ರ ಪರವಾನಿಗೆ ಇರುತ್ತದೆ ಎಂದರೆ ಸಾಕ್ಷಿಯು ಆಗಿನ ಕಾಲದಲ್ಲಿ ಪರವಾನಿಗೆ ಇರಲ್ಲಿಲ್ಲ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು ಬಸವನ ಬಾಗೇವಾಡಿ.**